# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ


ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ


ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.30/ಪಿಆರ್:34:2021-22 ದಿನಾಂಕ:19.03.2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)/ಪಿಆರ್/35/2020-21, ದಿ.16.04.2021ರ ಆದೇಶದಂತೆ ದಿ.19.03.2022 ರಂದು ನಡೆದ ಬಾಗಲಗುಂಟೆ ವಾರ್ಡ್ ನಂ.14ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ಸಭೆಗೆ ಹಾಜರಾಗಿದ್ದವರ ವಿವರಗಳು:-

| ಕ್ರಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಕೆ.ಮರುಳಸಿದ್ದಪ್ಪ | ಕಾರ್ಯಪಾಲಕ ಅಭಿಯಂತರರು, ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು |
| 2 | ಶ್ರೀ.ವೆಂಕಟೇಶಪ್ಪ | ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ನಂ.14, ಬಾಗಲಗುಂಟೆ |
| 3 | ಶೋಭ ಜೆ | ಪ್ರಾಥಮಿಕ ಆರೋಗ್ಯ ಕೇಂದ್ರ, ಬಾಗಲಗುಂಟೆ |
| 4 | ಶ್ರೀ.ಚೈತ್ರ ಎಂ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ಮಂಜುನಾಥ್ ಡಿ | ವಾಟರ್ ಇನ್ಸ್‌ಪೆಕ್ಟರ್ |
| 6 | ಶ್ರೀ.ರವಿಕುಮಾರ್ | ವಾಟರ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಾಗಲಗುಂಟೆ |
| 7 | ಶ್ರೀ.ಸುದರ್ಶನ್ | ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಾಗಲಗುಂಟೆ |
| 8 | ಶ್ರೀ.ಕೃಷ್ಣಮೂರ್ತಿ | ಡಿಫೆನ್ಸ್ ಕಾಲೋನಿ, ನಾಗರೀಕ ಕ್ಷೇಮಾಭಿವೃದ್ಧಿ ಸಂಘ |
| 9 | ಶ್ರೀ.ಸದಾಶಿವ | ನಾಗರೀಕ ಹಿತ ರಕ್ಷಣಾ ಸಮಿತಿ, ಎಂ.ಇ.ಐ ಬಡಾವಣೆ |
| 10 | ಶ್ರೀ.ವೇಣುಗೋಪಾಲ್ | ನಾಗರೀಕ ಹಿತ ರಕ್ಷಣಾ ಸಮಿತಿ ಸದಸ್ಯರು |
| 11 | ಶ್ರೀ.ಎಂ.ವಿ ಮೂರ್ತಿ | ಅಧ್ಯಕ್ಷರು, ಸೌಂದರ್ಯ ವೆಲ್‌ಫೇರ್ ಅಸೋಸಿಯೇಷನ್ |
| 12 | ಶ್ರೀ.ಸಾಮ್ಯುಲ್ ಎ | ತೋಟಗಾರಿಕೆ ಇಲಾಖೆ |
| 13 | ಶ್ರೀ.ಸಂಜೀವಪ್ಪ | ಅರಣ್ಯ ಇಲಾಖೆ |
| 14 | ಶ್ರೀ.ರಾಮಪ್ರಸಾದ್ ಎಸ್.ಆರ್ | ಸಿದ್ದೇಶ್ವರ ಬಡಾವಣೆ |
| 15 | ಶ್ರೀ.ಡಾ\|\| ಹರ್ಷಿತ್ | ಮೆಡಿಕಲ್ ಆಫೀಸರ್, ಪ್ರಾಥಮಿಕ ಆರೋಗ್ಯ ಕೇಂದ್ರ, ಬಾಗಲಗುಂಟೆ. |

ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು, ಹಾಜರಿದ್ದ ಅಧಿಕಾರಿಗಳನ್ನು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಈ ಹಿಂದಿನ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ, ಬಾಕಿ ಇರುವ ಕುಂದು ಕೊರತೆಗಳನ್ನು ಆದ್ಯತೆಯ ಮೇಲೆ ಪೂರೈಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

## ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸಂಬಂಧಪಟ್ಟ ವಿಷಯದ ಬಗ್ಗೆ.

ಬಾಗಲಗುಂಟೆ ವಾರ್ಡ್ ವ್ಯಾಪ್ತಿಯಲ್ಲಿನ ಹಾವನೂರು ಬಡಾವಣೆಯಲ್ಲಿ 6ನೇ ಮತ್ತು 8ನೇ ಅಡ್ಡರಸ್ತೆಯಲ್ಲಿ ಯಾವುದೇ ಪರವಾನಗಿ ಪಡೆಯದೇ ರಸ್ತೆಯನ್ನು ಕತ್ತರಿಸಿರುವುದು ಕಂಡುಬಂದಿರುತ್ತದೆ ಹಾಗೂ ವಿನಾಯಕ ಬಡಾವಣೆ ಮತ್ತು ಭುವನೇಶ್ವರಿನಗರದ 2ನೇ ಅಡ್ಡರಸ್ತೆಯಲ್ಲಿಯೂ ಸಹ ಒಳಚರಂಡಿ ವ್ಯವಸ್ಥೆಗಾಗಿ ಪೈಪ್‌ಲೈನ್ ಅಳವಡಿಸಲು ಅನಧಿಕೃತವಾಗಿ ರಸ್ತೆಯನ್ನು ಕತ್ತರಿಸಿರುವುದು ಕಂಡು ಬಂದಿರುತ್ತದೆ. ಈ ವಿಷಯವಾಗಿ ವಾರ್ಡ್‌ನ ಅಭಿಯಂತರರಿಗೆ ನಿಯಮಾನುಸಾರ ಕಾನೂನು ರೀತಿ ಸೂಕ್ತ ಕ್ರಮವಹಿಸಲು ಸೂಚಿಸಿದೆ ಹಾಗೂ ಸದರಿ ರಸ್ತೆಯ ದುರಸ್ಥಿ ಕಾರ್ಯವನ್ನು ತುರ್ತಾಗಿ ನಿರ್ವಹಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಶ್ರೀ.ಮಂಜುನಾಥ್ ಡಿ & ಶ್ರೀ.ರವಿಕುಮಾರ್ ವಾಟರ್ ಇನ್ಸ್‌ಪೆಕ್ಟರ್ ರವರುಗಳಿಗೆ ಸೂಚಿಸಲಾಯಿತು.

ಕ್ರಮ:ಸಹಾಯಕ ಅಭಿಯಂತರರು ವಾ-14/ಸದಸ್ಯ ಕಾರ್ಯದರ್ಶಿ

- **ಘನತ್ಯಾಜ್ಯ ನಿರ್ವಹಣೆ ಬಗ್ಗೆ.**

ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪರಿಣಾಮಕಾರಿಯಾಗಿ ಘನತ್ಯಾಜ್ಯ ವಿಲೇವಾರಿ ಮಾಡಲು ಕ್ರಮವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು ಹಾಗೂ ಸಂಬಂಧಿಸಿದ ಗುತ್ತಿಗೆದಾರರು ಹಾಗೂ ಮೇಲ್ವಿಚಾರಕರುಗಳು ಹಾಜರಿದ್ದು, ಘನತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಸೂಚಿಸಲಾಯಿತು.

ಕ್ರಮ:ಸ.ಕಾ.ನಿ.ಅ (ಘ.ತ್ಯಾ.ನಿ)/ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರು

- **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಂಬಂಧಿಸಿದಂತೆ, ಆರೋಗ್ಯ ಪರಿವೀಕ್ಷಕರು ಈ ಕೆಳಕಂಡಂತೆ ಮಾಹಿತಿ ಒದಗಿಸಿದರು.

| | |
|---|---|
| ಒಟ್ಟು ಪ್ರಕರಣಗಳು | 9098 |
| ಬಿಡುಗಡೆಯಾದ ಪ್ರಕರಣಗಳು | 8937 |
| ಸಕ್ರಿಯ ಪ್ರಕರಣಗಳು | 0 |
| ಮರಣ | 161 |

ಇರುತ್ತದೆಂದು ಹಾಗೂ 12 ರಿಂದ 14 ವರ್ಷದ ಮಕ್ಕಳಿಗೆ ಲಸಿಕೆಯನ್ನು ಹಾಕಲಾಗುತ್ತಿದೆ.. ಎಲ್ಲರೂ ಸಹಕರಿಸಿ ಮಕ್ಕಳಿಗೆ ಲಸಿಕೆ ಹಾಕಿಸಲು ಕೋರಿದರು. ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಲಸಿಕಾ ಕಾರ್ಯಕ್ರಮವನ್ನು ಮಾಲ್‌ಗಳು, ಅಪಾರ್ಟ್‌ಮೆಂಟ್‌ಗಳು ಹಾಗೂ ಹೆಚ್ಚಿನ ಜನಸಂದಣಿ ಇರುವ ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಕೈಗೊಳ್ಳುತ್ತಿರುವ ಬಗ್ಗೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಶೇ.100 ರಷ್ಟು ಜನ 1ನೇ ಡೋಸ್ ಲಸಿಕೆಯನ್ನು ಪಡೆದಿರುವುದಾಗಿ ಹಾಗೂ ಶೇ.75% ರಷ್ಟು 2ನೇ ಡೋಸ್ ಪಡೆದಿರುವುದಾಗಿ ಮತ್ತು ಬೂಸ್ಟರ್ ಡೋಸ್‌ನ್ನು ಕೋವಿಡ್ ನಿಯೋಜನೆಗೊಂಡಿರುವ ಸಾರ್ವಜನಿಕ ಸಂಪರ್ಕದ ಕಾರ್ಯಕರ್ತರಿಗೆ ನೀಡಿರುವುದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಸಭೆಯಲ್ಲಿ ತಿಳಿಸಿದರು. ಶೇ.100 ರಷ್ಟು ಪ್ರಗತಿಯನ್ನು ಸಾಧಿಸಲು ವಾರ್ಡ್ ಸಮಿತಿ ಸದಸ್ಯರು ಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಕ್ರಮ: ಕೋವಿಡ್ ಆರೋಗ್ಯ ವೈದ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು

* ಇತರೆ ವಿಷಯಗಳ ಬಗ್ಗೆ.

ವಾರ್ಡ್ ವ್ಯಾಪ್ತಿಯಲ್ಲಿನ ಹಲವಾರು ಬಡಾವಣೆಗಳ ರಸ್ತೆಗಳಲ್ಲಿ ಡಾಂಬರೀಕರಣ ಕಾಮಗಾರಿಯು ಪ್ರಗತಿಯಲ್ಲಿರುವುದಾಗಿ ವಾರ್ಡ್ ಅಭಿಯಂತರರು ತಿಳಿಸಿದರು.

ಸಿಡೇದಹಳ್ಳಿ 110 ಹಳ್ಳಿಗಳ ವ್ಯಾಪ್ತಿಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸುತ್ತಿದ್ದು, ರಸ್ತೆ ನಿರ್ಮಾಣಕ್ಕೆ ತೊಂದರೆಯಾಗುವ ಗಿಡಗಳ ಕೊಂಬೆಗಳನ್ನು ತುರ್ತಾಗಿ ತೆಗೆಯಲು ವಲಯ ಅರಣ್ಯಾಧಿಕಾರಿಗಳಿಗೆ ಸೂಚಿಸಲಾಯಿತು.

ಶ್ರೀ.ಕೃಷ್ಣಮೂರ್ತಿ, ವಾರ್ಡ್ ಸಮಿತಿ ಸದಸ್ಯರು ರವರು ಡಿಫೆನ್ಸ್ ಕಾಲೋನಿಯಲ್ಲಿ ಕಾಂಕ್ರೀಟ್ ಚರಂಡಿ ಹಾಗೂ ರಸ್ತೆಯನ್ನು ನಿರ್ಮಿಸಿಕೊಡಲು ಸಭೆಯಲ್ಲಿ ಕೋರಿದರು.

ಬೆಸ್ಕಾಂ ಇಲಾಖೆಯವರು ಶೂಟಿಂಗ್ ಬಂಗಲೆ ರಸ್ತೆಯಲ್ಲಿ ಹೊಸದಾಗಿ ವಿದ್ಯುತ್ ಸಂಪರ್ಕದ ಲೈನ್ ಹಾಕಿದ್ದು, ಇಲ್ಲಿ ವಿದ್ಯುತ್ ಕಂಬವನ್ನು ಅಳವಡಿಸಿ ಬಲ್ಬ್‌ಗಳನ್ನು ಹಾಕಿ ಸಾರ್ವಜನಿಕರ ಅನುಕೂಲಮಾಡಿಕೊಡಬೇಕೆಂದು ವಾರ್ಡ್ ಸಮಿತಿ ಸದಸ್ಯರುಗಳು ಕೋರಿದರು. ಬೆಸ್ಕಾಂ ಇಲಾಖೆಯ ಸಂಬಂಧಪಟ್ಟವರಿಗೆ ತುರ್ತು ಕ್ರಮವಹಿಸುವ ಬಗ್ಗೆ ತಿಳಿಸಲು ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

ಕ್ರಮ:ಸ.ಅ ವಾ.14/ ಸ.ಕಾ.ನಿ.ಅ (ದಾಸರಹಳ್ಳಿ ಉಪ-ವಿಭಾಗ)

19/03/2022

ಸಹಾಯಕ ಅಭಿಯಂತರರು
ಹಾಗೂ ಸದಸ್ಯ ಕಾರ್ಯದರ್ಶಿ ವಾರ್ಡ್ ಸಮಿತಿ

ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.14, ಬಾಗಲಗುಂಟೆ
ಮತ್ತು ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಅಧಿಕಾರಿಗಳ ಮಾಹಿತಿಗಾಗಿ:-</u>

1) ಸನ್ಮಾನ್ಯ ಶ್ರೀ.ಆರ್.ಮಂಜುನಾಥ್ ರವರು, ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
3) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
4) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
5) ಆರೋಗ್ಯ ವೈದ್ಯಾಧಿಕಾರಿಗಳು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ವಲಯ ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
9) ಸಹಾಯಕ ಕಂದಾಯ ಅಧಿಕಾರಿ (ದಾ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಳುಹಿಸಿದೆ.
12) ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 14 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
13) ಕಲ್ಯಾಣಾಧಿಕಾರಿಗಳು (ದಾವ) ಬಿಬಿಎಂಪಿ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
14) ಕಛೇರಿ ಪ್ರತಿ.